# ಆಹಾ ಸುದ್ದಿ!

★ ಸಸಿತೋಟ



ನ್ಯೂಯಾರ್ಕ್‌ನ ಬ್ರಾಂಕ್ಸ್ ಮೃಗಾಲಯ ಭಗ್ನ ಪ್ರೇಮಿಗಳಿಗೆ, ಅತ್ತೆಯರಿಂದ ಪೀಡಿತರಾದ ಸೊಸೆಯಂದಿರಿಗೆ/ ಅಳಿಯಂದಿರಿಗೆ ಸಾಂತ್ವನ ನೀಡಲು 'ಜಿರಲೆಗೆ ಹೆಸರು ಕೊಡಿ' ಎಂಬ ಆಟವನ್ನು ವ್ಯಾಲೆಂಟೈನ್ ದಿನ ಘೋಷಿಸಿದೆಯಂತೆ. ಕೈಕೊಟ್ಟ ತನ್ನ ಹಳೆಯ ಪ್ರೇಮಿಯ ಅಥವಾ ಕಿರುಕುಳ ನೀಡುವ ಅತ್ತೆಯ ಹೆಸರನ್ನು ಜಿರಲೆಗೆ ಇಟ್ಟು ಖುಷಿ ಪಡಬಹುದು. ಸೇಡು ತೀರಿಸಿಕೊಳ್ಳಲು ಎಷ್ಟು ಸರಳ ಉಪಾಯ.

ಥಾಯ್ಲೆಂಡ್‌ನಲ್ಲಿ ವ್ಯಾಲೆಂಟೈನ್ ದಿನದ ಅಂಗವಾಗಿ ರೆಸಾರ್ಟ್‌ನಲ್ಲಿ ಸಾಹಸ ಆಧಾರಿತ ವಿವಾಹ ಸಮಾರಂಭ ನಡೆಯಿತಂತೆ. ಅಲ್ಲಿ ವಿವಾಹವಾದ ಜೋಡಿಗಳಿಗೆ ಓಟದ ಸ್ಪರ್ಧೆಯೂ ಇತ್ತು. ಬದುಕೆಂಬ ಓಟದ ಸ್ಪರ್ಧೆಯಲ್ಲಿ ಯಾರು ಗೆಲ್ಲುತ್ತಾರೋ ಬಿಡುತ್ತಾರೋ, ಆದರೆ ಥಾಯ್ಲೆಂಡ್ ಸರ್ಕಾರ ಮಾತ್ರ ಅಲ್ಲಿಯ ಯುವಕ/ ಯುವತಿಯರನ್ನು ವಿವಾಹ ಪೂರ್ವ ಲೈಂಗಿಕತೆಯಿಂದ ವಿಮುಖರಾಗಿ ಓಡಿಸಲು ಈ ವಿವಾಹ ಸಮಾರಂಭ ನಡೆಸಿದ್ದು ಈಗ ಗುಟ್ಟಾಗಿ ಉಳಿದಿಲ್ಲ.



ಚೀನಾದಲ್ಲಿ ಉಪಾಹಾರಗೃಹಗಳಲ್ಲಿ ಸಿಬ್ಬಂದಿ ಕೊರತೆ ನೀಗಿಸಲು ರೊಬಾಟ್ ಪರಿಚಾರಕರನ್ನು ನೇಮಿಸಿಕೊಳ್ಳಲಾಗಿದೆಯಂತೆ. ಟೇಬಲ್ ಹಿಡಿದ ಗ್ರಾಹಕರು ಅಲ್ಲಿರುವ ಟ್ಯಾಬ್ಲೆಟ್‌ನಲ್ಲಿ ತಿನಿಸುಗಳನ್ನು ಆಯ್ಕೆ ಮಾಡಿದರಾಯ್ತು, ರೊಬಾಟ್ ಪ್ಲೇಟ್ ಹಿಡಿದು ಹಾಜರಾಗುತ್ತದೆ. ಉಪ್ಪು ಕಡಿಮೆ, ಖಾರ ಜಾಸ್ತಿ, ಕಾಫಿಯಲ್ಲಿ ನೊಣ ಬಿದ್ದಿದೆ ಎಂದು ಅದನ್ನು ಬಯ್ಯುವಂತೆಯೂ ಇಲ್ಲ. ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಡ್ರೋನ್ ಮೂಲಕ ಪಿಜ್ಜಾ ಮನೆಗೆ ಕಳಿಸಲಾಗುತ್ತಿದೆಯಂತೆ. ನಿರುದ್ಯೋಗ ನಿರ್ಮೂಲನೆ ಅಂದರೆ ಇದೇ ಇರಬಹುದು.



ಚೀನಾದ ಹೊಸ ವರ್ಷ ಸಮೀಪ ಬರುತ್ತಿದ್ದು, ಅಲ್ಲಿಯ ಬಾಣಸಿಗನೊಬ್ಬ ಚಿನ್ನದ ಪುಡಿ ಬಳಿದ ಚಾಕೊಲೇಟ್ ತಯಾರಿಸಿದ್ದಾನೆ. ಚೀನೀಯರ ಆರ್ಥಿಕ ಮಟ್ಟ ಏರಿಕೆ ಕಾಣುತ್ತಿದ್ದು, ಸಂಪೂರ್ಣ ಚಿನ್ನದಿಂದಲೇ ತಯಾರಿಸಿದ ಚಾಕೊಲೇಟ್ ಚಪ್ಪರಿಸುವವರ ಸಂಖ್ಯೆಯೂ ಸಾಕಷ್ಟಿರಬಹುದು.

ನೆದರ್ಲೆಂಡ್‌ನ ಮನೆಯ ಛಾವಣಿಯ ಮೇಲೆ ಹಿಮ ಇಲ್ಲದಿದ್ದರೆ ಪೊಲೀಸರು ಧಾವಿಸಿ ಬರುತ್ತಾರೆ. ಮಾರಿಜುವಾನಾ ಒಣಗಿಸಲು ಬಳಸುವ ಬೆಂಕಿಯಿಂದ ಹಿಮ ಕರಗುತ್ತದೆ ಎಂಬುದು ಒಂದೆರಡು ಘಟನೆಗಳಿಂದ ಸಾಬೀತಾಗಿದೆಯಂತೆ. 'ನಿಮ್ಮ ಅಕ್ಕಪಕ್ಕದ ಮನೆಯ ಛಾವಣಿ ಹಿಮರಹಿತವಾಗಿದ್ದರೆ ಮಾದಕ ದ್ರವ್ಯ ಮಾರಿಜುವಾನಾ ಇದೆ ಎಂದು ದೂರು ಕೊಡಬಹುದು' ಎಂದು ಪೊಲೀಸರು ಟ್ವೀಟ್ ಮಾಡಿದ್ದಾರಂತೆ. ವಂಚಕರು ಪಕ್ಕದ ಮನೆಯ ಛಾವಣಿ ಮೇಲಿರುವ ಹಿಮ ಹೊತ್ತುಕೊಂಡು ಬಂದು ತಮ್ಮ ಮನೆಯ ಮೇಲೆ ಹಾಕಿಕೊಳ್ಳಬಹುದು.



ಲಂಡನ್ನಿನಲ್ಲಿ ನಡೆದ ಜಗತ್ತಿನ ಅತ್ಯಂತ ಬೃಹತ್ ನಿಟ್ಟಿಂಗ್ ಆ್ಯಂಡ್ ಸ್ಟಿಚಿಂಗ್ ಶೋನಲ್ಲಿ ಡೆನ್ಮಾರ್ಕ್‌ನ ಮಿರಿಯ ಅತ್ಯಂತ ದೊಡ್ಡದಾದ ನಿಟ್ಟಿಂಗ್ ಕಡ್ಡಿಗಳನ್ನು ಬಳಸಿ ದಾಖಲೆ ಮಾಡಿದಳು. ಡ್ಯಾನಿಷ್ ಜನ ಪ್ರಪಂಚದಲ್ಲೇ ಹೆಚ್ಚು ಖುಷಿಯಿಂದ ಇರುವ ಜನರಂತೆ. ಹಾಗೆಯೇ ನಿಟ್ಟಿಂಗ್‌ಗೂ ಆ ದೇಶ ಖ್ಯಾತಿ ಪಡೆದಿದೆ. ಈ ಖುಷಿಯ ಹಿಂದಿನ ರಹಸ್ಯ ನಿಟ್ಟಿಂಗ್ ಎಂಬುದರ ಬಗ್ಗೆ ಸದ್ಯ ಯಾವ ಸಂಸ್ಥೆಯೂ ಸಂಶೋಧನೆಗೆ ಇಳಿದ ಹಾಗಿಲ್ಲ.